**ದಿಃ 25-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:- ಕೆ.ಎನ್.ಬಿ. ವಕೀಲರಿಂದ ಪ್ರತಿವಾದಿಯ ಪರವಾಗಿ.**

ನನ್ನ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಖಾಯಂ ತರಿಖವಾಗಿ ಮುದ್ದೇಬಿಹಾಳ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು ಮದುವೆಯಾದ ನಂತರ ಎಂದಿಗೂ ತವರು ಮನೆಗೆ ಈವರೆಗೂ ಹೋಗಿ ಬಂದು ಮಾಡಿರುವದಿಲ್ಲ. ದಾವಾ ಆಸ್ತಿಗಳು 2 ಜಮೀನು, ಒಂದು ಪ್ಲಾಟ ಮತ್ತು ಒಂದು ಮನೆ ಇರುತ್ತದೆ. ನನ್ನ ತಂದೆಯ ಜೀವಿತ ಇದ್ದಾಗ 1994 ರಲ್ಲಿ ಪ್ರತಿವಾದಿ ನಂ.1 ಮತ್ತು 2ರವರಿಗೆ ದಾವಾ ಆಸ್ತಿಯನ್ನು ವಿಭಾಗ ಮಾಡಿ ಕೊಟ್ಟಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1994 ರಲ್ಲಿಯೆ ವಿಭಾಗ ಮಾಡಿಕೊಟ್ಟಿದ್ದರಿಂದ ನನಗೆ ಸದರಿ ದಾವಾ ಆಸ್ತಿಯಲ್ಲಿ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.7 ರಿಂದ 9 ರವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ವಿಭಾಗದ ಕಾಲಕ್ಕೆ ನಮಗೆ ಬರಬೇಕಾದ ಭಾಗವನ್ನು ನೀಡಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 2 ರವರ ಮಗಳನ್ನು ನನ್ನ ಮಗನಿಗೆ ಮಾಡಿಕೊಡುವಂತೆ ಕೇಳಿದಾಗ ಆತನು ನಿರಾಕರಿಸಿದ್ದಕ್ಕೆ ಅವನ ವಿರುಧ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಓ ಹೆ ಕೆ ಸರಿ ಅದೆ-

ಸಿವಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.